1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 2073/2021

ಪಿರ್ಯಾದಿ ಃ ರಾಜ್ಯದ ಪರವಾಗಿ ಲಿಂಗದಹಳ್ಳಿ ಪೊಲೀಸರು

- ವಿರುದ್ಧ -

ಆರೋಪಿ/ತರುಃ

1) ಬಸವರಾಜ ಬಿನ್ ರುದ್ರಪ್ಪ, 60 ವರ್ಷ, ವ್ಯವಸಾಯಗಾರರು,
2) ಮಂಜುಳ ಕೋಂ ಬಸವರಾಜ್, 55 ವರ್ಷ, ವ್ಯವಸಾಯಗಾರರು,
3) ಮನು ಬಿನ್ ಬಸವರಾಜ್, 23 ವರ್ಷ, ವ್ಯವಸಾಯಗಾರರು,
4) ರಘು ಬಿನ್ ಬಸವರಾಜ್, 55 ವರ್ಷ, ವ್ಯವಸಾಯಗಾರರು,
5) ಗಿರೀಶ ಬಿನ್ ಬಸವರಾಜ್, 25 ವರ್ಷ, ವ್ಯವಸಾಯಗಾರರು,

ಆ-1 ರಿಂದ 5 ವಾಸಃ ದುರ್ಗಾಪುರ ಗ್ರಾಮ, ಕಸಬಾ ಹೋಬಳಿ, ತರೀಕೆರೆ ತಾಲ್ಲೂಕು.

6) ಬಸವರಾಜ ಬಿನ್ ಚನ್ನವೀರಪ್ಪ, 45 ವರ್ಷ, ವ್ಯವಸಾಯಗಾರರು,
7) ಕುಮಾರ ಬಿನ್ ಚನ್ನವೀರಪ್ಪ, 40 ವರ್ಷ, ವ್ಯವಸಾಯಗಾರರು,

ಆ-6 ಮತ್ತು 7 ವಾಸಃ ಹುಲಿತಿಮ್ಮಾಪುರ ಗ್ರಾಮ, ಲಿಂಗದಹಳ್ಳಿ ಹೋಬಳಿ, ತರೀಕೆರೆ ತಾಲ್ಲೂಕು.

****

-ಃ ದೋಷಾರೋಪಣೆಃ-

ಶ್ರೀಮತಿ ಉರ್ಮಿಳ.ವಿ., ಬಿ.ಎ.ಎಲ್, ಎಲ್.ಎಲ್.ಬಿ., 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ ಆದ ನಾನು ಆರೋಪಿತರಾದ ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆಗಳೇನೆಂದರೆಃ-

ದಿನಾಂಕ 22.04.2021 ರಂದು ಮಧ್ಯಾಹ್ನ ಸುಮಾರು 12.00 ಗಂಟೆ ಸಮಯದಲ್ಲಿ ಲಿಂಗದಹಳ್ಳಿ ಪೊಲೀಸ್ ಠಾಣಾ ಸರಹದ್ದಿನ ಲಿಂಗದಹಳ್ಳಿ ಗ್ರಾಮದ ಸರ್ವೆ

ನಂ.78 ರ ಜಮೀನಿಗೆ ಚಾಸಾ-4 ಶ್ರೀಮತಿ ಗಿರಿಜಮ್ಮರವರು ಜಮೀನಿಗೆ ಹೋಗಿದ್ದಾಗ, ಸರ್ವೆ ನಂ.78 ಮತ್ತು 79 ರಲ್ಲಿರುರ 6 ಎಕರೆ 20 ಗುಂಟೆ ಜಮೀನು ಚಾಸಾ-1 ನಂಜುಂಡಪ್ಪ ಇವರ ಅಣ್ಣ ತಮ್ಮಂದಿರಿಗೆ ಹಿಸ್ಸೆಗೆ ಸೇರಬೇಕು ಎಂದು ವಿವಾದವಿರುವ ವಿಚಾರದಲ್ಲಿ ಅಲ್ಲಿಗೆ ಆರೋಪಿತರಾದ ನೀವು ಏಕೋದ್ದೇಶದಿಂದ ಬಂದು ಚಾಸಾ-4 ರವರಿಗೆ, ಸೂಳೆಮಕ್ಕಳಾ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಬಂದು ಕೈಗಳಿಂದ ಚಾಸಾ-4 ರವರಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 323 ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಮೂರನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಬಂದು 3 ನೇ ಆರೋಪಿಯಾದ ನೀವು ಕೋಲಿನಿಂದ ಚಾಸಾ-4 ರವರಿಗೆ ಹೊಡೆದು ಹಾಗೂ ಅದೇ ಕೋಲಿನಿಂದ 5 ನೇ ಆರೋಪಿಯಾದ ನೀವು ಚಾಸಾ-4 ರವರಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 324 ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನಾಲ್ಕನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ 6 ಮತ್ತು 7 ನೇ ಆರೋಪಿತರಾದ ನೀವು ಸೇರಿಕೊಂಡು ಚಾಸಾ-4 ರವರ ಸೀರೆ ಮತ್ತು ಜಾಕೀಟು ಹಿಡಿದು ಎಳೆದಾಡಿ ಅವರ ಮಾನಕ್ಕೆ ಧಕ್ಕೆಯನ್ನುಂಟು ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 354 ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಕೊನೆಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ, ಚಾಸಾ-4 ರವರಿಗೆ ಈ ಜಮೀನಿನ ವಿಚಾರದಲ್ಲಿ ಬಂದರೆ ಸುಮ್ಮನೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 506 ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನೀವು ಸದರಿ ಆರೋಪದ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕುದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ ಃ 01.06.2026

ಸಹಿ
(ಉರ್ಮಿಳ.ವಿ)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.